

ಸೀಟು ಇವರಿಗೇ ಎಂಬಂತೆ ಮೀಸಲಾಯ್ತು. ಒಮ್ಮೆ ಹತ್ತಿ ಕೂತರೆ ಮುಗಿಯಿತು, ಮಾತು ಮಾತು ಮಾತು. ಅಷ್ಟೊಂದು ಮಾತಾಡಲು ಏನಿರುತ್ತಿತ್ತೋ ಎಂದು ಕಂಡವರು ಸಂದೇಹ ಪಡುವಷ್ಟು ಮಾತು. ಅದೂ ಸಾಲದೆಂಬಂತೆ ಅವಳು ಅವನಿಗೂ ಸೇರಿ ಬೆಳಗಿನ ಟಿಫನ್, ಮಧ್ಯಾಹ್ನದ ಊಟ ಕಟ್ಟಿಕೊಳ್ಳುತ್ತಿದ್ದಳು. ಆಮೇಲಿನಿಂದ ಅವನು ಊಟದ ಕ್ಯಾರಿಯರ್ ಒಯ್ಯುವುದನ್ನ ನಿಲ್ಲಿಸಿದ. ತುಸು ಬಡವಳಾದ ಆಕೆಗೆ ಅವನು ತನ್ನ ತಿಂಗಳ ಸಂಬಳವನ್ನೆಲ್ಲ ಕೊಟ್ಟುಬಿಡುತ್ತಾನೆಂಬ ಮಾತೂ ಚಾಲ್ತಿಯಲ್ಲಿತ್ತು. ಇನ್ನು ಅವನ ಹೆಂಡತಿ! ಅವಳಂತೂ ಅತಿ ಸಾಮಾನ್ಯ ಹೆಣ್ಣು; ಗಂಡನ ಕುರಿತ ಯಾವ ಸುದ್ದಿ ತಲುಪಿದರೂ ಗಂಡನನ್ನು ಬಿಟ್ಟು ಹೋಗುವ ಧೈರ್ಯ ಅವಳಲ್ಲಿದ್ದಂತಿರಲಿಲ್ಲ. ಹಾಗಾಗಿಯೋ ಏನೋ ಅವಳು ಊರಿನ ಮಾತುಗಳಿಗೆ ಕಿವುಡಾಗಿ ಸುಮ್ಮನೆ ಮನೆ, ತೋಟ ಮಕ್ಕಳು ಅಂತ ಉಳಿದಳು. ಇನ್ನು ಈ ಇವಳು ಕೆಲಸಕ್ಕೆ ಸೇರಿ ಒಂದೆರಡು ವರ್ಷಗಳ ಬಳಿಕ ಮತ್ತೊಂದು ಮಗು ಹಡೆದಳು. ಅದಂತೂ ನಿಶ್ಚಯ ಅವನಿಗೆ ಹುಟ್ಟಿದ್ದೇ ಹೊರತು ಗಂಡನಿಗಲ್ಲ ಎಂದಿತು ಊರು. ಆದರೆ ಅದಕ್ಕೆ ಸಂಬಂಧಪಟ್ಟ ಯಾರೂ ಯಾವ ವಿವರಣೆಯನ್ನೂ ಕೊಡಹೋಗದೆ ಅದೆಲ್ಲವನ್ನೂ ನಿರ್ಲಕ್ಷಿಸಿಬಿಟ್ಟರು. ಎಲ್ಲರಿಗೂ ಅವಳ ಗಂಡನ ಅಲಕ್ಷ್ಯದ ಕುರಿತ ಅಚ್ಚರಿಯಿತ್ತು. ಅವನು ಹೇಗೆ ತನ್ನ ಹೆಂಡತಿಯನ್ನು ಹಾಗೆ ಯಾವ ತಕರಾರಿಲ್ಲದೆ ಹಂಚಿಕೊಳ್ಳುತ್ತಾನೆಂಬ ಸಹಜ ಕುತೂಹಲ! 'ನೀವು ಅದು ಹೇಗೆ ಹೇಳ್ತೀರಿ ಅವನಿಗೆ ತಕರಾರಿರಲಿಲ್ಲ ಅಂತ?' ನಾನು ಅವನ ಕತೆಯನ್ನು ಮುರಿದೆ. ಆದರೆ ಅವನು ನನಗೆ ಉತ್ತರಿಸದೆ ಮುಂದುವರೆಸಿದ: 'ಮೊದಲು ಕೇಳಿ ಸರ್, ಅವಳು ಕೆಲಸಕ್ಕೆ ಹೋಗತೊಡಗಿದಾಗಿಂದ ಅವರ ಮನೆ ಪರಿಸ್ಥಿತಿ